ಆದರೆ ನನ್ನಜ್ಜಿ ಗಾಂಧಿವಾದಿಯಾಗಿದ್ದಳು. ಗಾಂಧಿವಾದಕ್ಕೆ ಸಮಾಜವಾದ ಬಹಳ ಹತ್ತಿರವಾದದ್ದು ಎನಿಸಿತು. ನನ್ನ ಜೀವನದ ಅತ್ಯುತ್ತಮ ನಿರ್ಧಾರವಿದು. ವಿಮರ್ಶಕರಾಗಿ ನಾಗಭೂಷಣ ಅವರದು ಕೆಲವೊಮ್ಮೆ ಬಹಳ ಕಟುವಾದ ನಿಲುವು. ಅವರ ವಿಮರ್ಶೆಯ ಪ್ರಹಾರ ನನ್ನ ಮೇಲೂ ಆಗುವುದಿದೆ. ಇಲ್ಲ ಅನ್ನುವುದಿಲ್ಲ ನಾನು. ಆದರೆ ಅವರು ಯಾವತ್ತೂ ನನ್ನ ಕವಿತೆಯಲ್ಲಿ ಹಸ್ತಕ್ಷೇಪ ಮಾಡಿಲ್ಲ. ಮೊದ ಮೊದಲು ಪದ್ಯ ಬರೆದ ಕೂಡಲೇ ತೋರಿಸುತಿದ್ದೆ. ನನ್ನ ಬರವಣಿಗೆಯ ಬಗ್ಗೆ ನನಗೆ ಆತ್ಮವಿಶ್ವಾಸ ಇರುವುದರಿಂದ ಅವರು ಏನಾದರೂ ಕವಿತೆ ಬಗ್ಗೆ ಹೇಳಿದರೆ 'ನಿಮಗೆ ಕವಿತೆ ಅರ್ಥವಾಗುವುದಿಲ್ಲ' ಎಂದು ಹೇಳ್ತೀನಿ. ಎಷ್ಟೋ ಬಾರಿ ಅವರೇ ಹೇಳೋದಿದೆ. 'ನಾನು ಇದನ್ನು ಮೊದಲಿಗೆ ಓದಿದಾಗ ಅತಿ ಸಾಮಾನ್ಯ ಪದ್ಯ ಅನ್ಕೊಂಡಿದ್ದೆ; ಓದುಗರು ಓದಿ ಮೆಚ್ಚಿ ಏನೆಲ್ಲ ಅರ್ಥ ಹೇಳಿದಾರಲ್ಲ' ಅಂತ ಅಚ್ಚರಿ ಪಡೋದಿದೆ. ಆಗೆಲ್ಲ ನಾನು 'ನಿಮಗೆ ಪದ್ಯ ಅರ್ಥವಾಗುವುದಿಲ್ಲ ಅಂತ ಗೊತ್ತಾಯಿತಾ' ಎನ್ನುತ್ತೇನೆ.

**● ಸಮಕಾಲೀನ ಕವಿಗಳಲ್ಲಿ ನಿಮಗೆ ಯಾರ ಕವಿತೆಗಳು ತುಂಬಾ ಇಷ್ಟ? ಯಾಕೆ? ನಿಮ್ಮ ಸಮಕಾಲೀನ ಕವಿಗಳ ಜೊತೆಗೆ ಕವಿಸಮಯದ ಜೊತೆಗೆ ವೈಯಕ್ತಿಕ ಬದುಕಿನಲ್ಲೂ ಸ್ನೇಹದ ಗಳಿಗೆಗಳಿವೆಯೇ?**

ಹಾಗೆಲ್ಲ ಹೆಸರು ಹೇಳೋದು ಕಷ್ಟ. ಯಾಕೆಂದರೆ ಐವತ್ತು ಜನ ಕವಿಗಳ ಕವಿತೆ ಓದಿದರೆ ಅವರು ಒಬ್ಬೊಬ್ಬರೂ ಇಪ್ಪತ್ತೈದು ಕವಿತೆ ಬರೆದಿದ್ರೆ ಅದರಲ್ಲಿ ಒಂದೆರಡು ಕವಿತೆಗಳಾದರೂ ನನಗೆ ಇಷ್ಟವಾಗೇ ಆಗತ್ತೆ. ಮತ್ತೆ ಹೀಗೆ ಪಟ್ಟಿ ಮಾಡುವಾಗ ಆ ಐವತ್ತು ಜನ ಕವಿಗಳಲ್ಲಿ ಒಂದಿಬ್ಬರ ಹೆಸರು ನಾನು ಬಿಟ್ಟರೂ ನನಗೆ ತುಂಬಾ ಬೇಸರ ಆಗತ್ತೆ. ಹಾಗೆ ನೋಡಲಿಕ್ಕೆ ಹೋದರೆ ನಾನು ಕವಿಗಳಿಗಿಂತ ಕತೆಗಾರರಿಂದ ಪ್ರಭಾವಿತಳಾಗಿದ್ದೇ ಹೆಚ್ಚು. ಕುವೆಂಪು, ಲಂಕೇಶ್, ತೇಜಸ್ವಿ, ಬಾಗಲೋಡಿ ದೇವರಾಯ, ರಾಘವೇಂದ್ರ ಖಾಸನೀಸ, ಕೆ. ಸದಾಶಿವ, ವೀಣಾ, ವೈದೇಹಿ ಹೀಗೆ ಆ ಪಟ್ಟಿ ಬೆಳೆಯುತ್ತದೆ.

ನಾಗಭೂಷಣ ಅವರು ಆಕಾಶವಾಣಿಯಲ್ಲಿದ್ದುದರಿಂದ ನಾವು ಆಕಾಶವಾಣಿಯ ಕ್ವಾಟ್ರರ್ಸ್‌ನಲ್ಲಿಯೇ ಇದ್ದಿದ್ದು; ಆಕಾಶವಾಣಿಗೆ ಬರುತಿದ್ದ ಬರಹಗಾರರು ಸಹಜವಾಗಿಯೇ ನಮ್ಮ ಮನೆಗೆ ಬರುತ್ತಿದ್ದರು. ಆದ್ದರಿಂದ ನನಗೆ ಬಹಳ ಲೇಖಕರ ಒಡನಾಟ ಸಿಕ್ಕಿತು. ಜಿ.ಎಸ್. ಶಿವರುದ್ರಪ್ಪನವರು ಮೊದಲಿಗೆ ನನ್ನಲ್ಲಿ ಕವಿತೆ ಬರೆಯಬಲ್ಲೆ ಅನ್ನೋ ಆತ್ಮವಿಶ್ವಾಸ ತುಂಬಿದವರು. ಕೆ.ಎಂ. ಶಂಕರಪ್ಪನವರು ಬುದ್ಧಾನುಯಾಯಿ ಚಿಂತಕರು. ಅವರು ಚೀನಿ ಸಾಹಿತ್ಯ, ಜೆನ್ ಸಾಹಿತ್ಯ ಅಂತೆಲ್ಲ ನನಗೆ ಓದಿಸಿದವರು. ನಿಜವಾದ ಅರ್ಥದಲ್ಲಿ ಅವರು ನನಗೆ ಮಾರ್ಗದರ್ಶಕರು. ಎಸ್. ಮಂಜುನಾಥ್ ಜೊತೆಗೂ ಒಳ್ಳೆಯ ಸ್ನೇಹವಿತ್ತು. ಅವರು ಕಾವ್ಯದ ಹುಚ್ಚಿನ ಮನುಷ್ಯರು. ಯಾವಾಗಲೂ ಹೊಸ ಹೊಸ ಪದ್ಯ ಬರೆದು ತಂದು ಓದುತ್ತಿದ್ದರು. ನಾವಿಬ್ಬರೂ ಸೇರಿ ಒಂದು ಕವನ ಸಂಕಲನ ತರೋಣ. ಅದರಲ್ಲಿ ನಿಮ್ಮದು ಮೂವತ್ತು, ನನ್ನದು ಮೂವತ್ತು ಪದ್ಯಗಳಿರಲಿ ಅಂತೆಲ್ಲ ಉತ್ಸಾಹ ತೋರಿಸುತ್ತಿದ್ದರು. ನಾನು, ನಾಗಭೂಷಣ, ಮಂಜುನಾಥ ಅವರ ಜೊತೆ ಮೇಲುಕೋಟೆಗೆ ಹೋಗಿದ್ದೆವು. ಅಲ್ಲಿಂದ ಮರಳಿದ ಮೇಲೆ ನಾನು 'ಚೆಲುವನಾರಾಯಣ' ಪದ್ಯ ಬರೆದರೆ, ಅವರು ಒಂದು ಪದ್ಯ ಬರೆದರು. ಅವರ ಜೊತೆ ನನಗೆ ಕಾವ್ಯ ಸಂವಾದ ಸಾಧ್ಯವಾಗುತ್ತಿತ್ತು. ಎಚ್.ಎಸ್. ಶಿವಪ್ರಕಾಶ ಅವರು ನಾವು ಬೆಂಗಳೂರಿನಲ್ಲಿರುವಾಗ ನಮ್ಮ ಮನೆಗೆ ಬಂದು ಅವರ ಕವಿತೆಗಳನ್ನು ಓದ್ತಾ ಇದ್ದರು. ಅವರು 'ಅಣುಕ್ಷಣ ಚರಿತೆ' ಸಂಕಲನದ ಬಹಳಷ್ಟು ಪದ್ಯಗಳನ್ನು ಆಗ ಬರೆದಿದ್ದು, ಆ ಕವಿತೆಗಳನ್ನು ಓದ್ತಾ 'ಬರೆದರೆ ಹೀಗೆ ಬರೆಯಬೇಕು' ಎಂದು ನನಗೆ ಅನಿಸುತ್ತಿತ್ತು.

**● ನಿಮ್ಮ 'ಸ್ತ್ರೀಲೋಕ' ಕಾದಂಬರಿ ತುಂಬ ವಿಶಿಷ್ಟವಾದದ್ದು; ಇಡೀ ಕಾದಂಬರಿಯನ್ನು ಸಂಭಾಷಣಾ**